ದೇವಸ್ಥಾನಕ್ಕೆ ದೇಣಿಗೆ ಸಲ್ಲಿಸುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ನೇರವಾಗಿ
ಅಥವಾ ಯುಪಿಐ ಮುಖಾಂತರ ಹಣ ಸಂದಾಯ ಮಾಡಿ
ರಶೀದಿ ಪಡೆಯಬೇಕಾಗಿ ವಿನಂತಿ.

**ಶ್ರೀ ಚನ್ನಕೇಶವ ದೇವಸ್ಥಾನದ ಬ್ಯಾಂಕ್ ಖಾತೆ ಸಂಖ್ಯೆ :**

CHENNAKESAVA DEVASTHANA
248427748059088@cnrb

**03382200059088**
CHENNAKESAVA DEVASTHANA
IFSC CODE : CNRB0010338
CANARA BANK , BRANCH-BILAGI
TQ : SIDDAPUR

ಯಾವುದೇ ರೀತಿಯ ವಸ್ತುಗಳು ಅಥವಾ ಇನ್ನಿತರ ಕಟ್ಟಡ ಸಾಮಗ್ರಿಗಳ
ರೂಪದಲ್ಲಿ ಸೇವೆ ಮಾಡಲು ಬಯಸುವವರು ಕಾರ್ಯಾಲಯವನ್ನು ಸಂಪರ್ಕಿಸಬಹುದು.

**ಮಾಹಿತಿಗಾಗಿ ಸಂಪರ್ಕಿಸಿ : 8762151249, 9480080270**
shreechannakeshavadevalaya@gmail.com

**ಧನ್ಯವಾದಗಳೊಂದಿಗೆ,**
**ಶ್ರೀ ಚನ್ನಕೇಶವ ದೇವಾಲಯ ಟ್ರಸ್ಟ್ (ರಿ.) ನಾಗಿನಮನೆ**
ಗೌರವಾಧ್ಯಕ್ಷರು, ಅಧ್ಯಕ್ಷರು ಹಾಗೂ ಕಾರ್ಯದರ್ಶಿ
ಆಡಳಿತ ಮಂಡಳಿಯ ಸದಸ್ಯರುಗಳು, ಸರ್ವಭಜಕರು ಮತ್ತು ಊರನಾಗರಿಕರು

॥ ಲೋಕಾಃ ಸಮಸ್ತಾಃ ಸುಖಿನೋ ಭವಂತು ॥

ಗೆ, ತೆರೆದ ಅಂಚೆ
ಶ್ರೀಮತಿ/ಶ್ರೀ ____________________

____________________

____________________

____________________

ಪ್ರಿಂಟ್ ಮೀಡಿಯಾ ಶಿರಸಿ@9449148165

॥ ಶ್ರೀ ಚನ್ನಕೇಶವ ಪ್ರಸನ್ನ ॥

# ಶ್ರೀ ಚನ್ನಕೇಶವ ದೇವಾಲಯ ನಾಗಿನಮನೆ



## ಆತ್ಮೀಯ ನಿವೇದನೆ

**ಶ್ರೀ ಚನ್ನಕೇಶವ ದೇವಾಲಯ ಟ್ರಸ್ಟ್ (ರಿ.) ನಾಗಿನಮನೆ**

ಕುಡೇಗೋಡ ಗ್ರಾಮ, ಅಂಚೆ : ದೊಡ್ಮನೆ, ತಾ: ಸಿದ್ದಾಪುರ.
ಉತ್ತರ ಕನ್ನಡ, ಪಿನ್ ಕೋಡ್ : 581322
ದೂರವಾಣಿ : 8762151249
shreechannakeshavadevalaya@gmail.com

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭವಿಷ್ಣುಂ ಮಹೇಶ್ವರಂ ॥
ಅನೇಕ ರೂಪ ದೈತ್ಯಾಂತಂ ನಮಾಮಿ ಪುರುಷೋತ್ತಮಮ್ ॥

## ಆಸ್ತಿಕ ಮಹನೀಯರಲ್ಲಿ ವಿನಮ್ರ ವಿನಂತಿ.

ಮಹನೀಯರೇ,

ನಮ್ಮ ಸಿದ್ದಾಪುರ ತಾಲೂಕಿನ ದೊಡ್ಮನೆ ಪಂಚಾಯತ ವ್ಯಾಪ್ತಿಯ ಕುಡೇಗೋಡ ಗ್ರಾಮದ ನಾಗಿನಮನೆಯಲ್ಲಿರುವ ಶ್ರೀ ಚನ್ನಕೇಶವ ದೇವಾಲಯವು 12 ನೇ ಶತಮಾನದಲ್ಲಿ ಅಂದರೆ ಸುಮಾರು 800 ವರ್ಷಗಳಷ್ಟು ಪ್ರಾಚೀನತೆಯನ್ನು ಹೊಂದಿರುವ ದೇವಾಲಯವೆಂಬ ಐತಿಹ್ಯವು ಇತಿಹಾಸ ಸಂಶೋಧಕರ ಅಧ್ಯಯನದಿಂದ ತಿಳಿದುಬಂದಿದೆ. ಸನಾತನ ಹಿಂದೂ ಸಂಸ್ಕೃತಿ, ಧಾರ್ಮಿಕ ಸತ್ಸಂಪ್ರದಾಯವನ್ನು ಮುನ್ನಡೆಸಿಕೊಂಡುಬಂದ ರಾಜವಂಶಸ್ಥರ ಆಡಳಿತಾವಧಿಯಲ್ಲಿ ಪ್ರತಿಷ್ಠಾಪನೆಗೊಂಡ ಶ್ರೀ ಚನ್ನಕೇಶವದೇವರು ಶಿಷ್ಠ ಶಿಲಾಮೂರ್ತಿಯ ಸ್ವರೂಪದಲ್ಲಿದ್ದು, ಗ್ರಾಮದ ಅಧಿದೇವನಾಗಿ ಪೂಜಿಸಲ್ಪಡುತ್ತಿದ್ದಾನೆ. ಬೇಲೂರಿನ ಶ್ರೀ ಚನ್ನಕೇಶವದೇವರ ಶಿಲಾಮೂರ್ತಿಯನ್ನೇ ಬಹುವಿಧದಲ್ಲಿ ಹೋಲುವ ದೇವರ ಶಿಲಾಸ್ವರೂಪಿಮೂರ್ತಿಯು ಶಂಖ, ಚಕ್ರ, ಗದಾ, ಪದ್ಮ ಹಸ್ತನಾಗಿದ್ದಾನೆ. ಶಿಲೆಯಲ್ಲಿ ಕಲೆಯನ್ನರಳಿಸಿದ ಹೊಯ್ಸಳ ಶೈಲಿಯ ಶಿಲ್ಪಕಲೆಯ ಕುಸುರಿ ಕೆತ್ತನೆಯ ಆವಿರ್ಭಾವ ಕಂಗಳಿಗೆ ಹಬ್ಬವಾಗಿದೆ. ಸರ್ವಾಭರಣ ಶೋಭಿತನಾದ ದೇವರ ಸುಂದರ ಮಂದಸ್ಮಿತ ಭಾವ ನೋಡುಗ ಭಕ್ತರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ನಾಗಿನಮನೆಯಲ್ಲಿ ವಿರಾಜಮಾನನಾಗಿರುವ ಶ್ರೀ ಚನ್ನಕೇಶವನು ಭಕ್ತರೆಲ್ಲರನ್ನು ತನ್ನ ಕೃಪಾಶೀರ್ವಾದದಿಂದ ರಕ್ಷಿಸುತ್ತಿದ್ದಾನೆಂಬುದು ನಮ್ಮೆಲ್ಲರ ಶ್ರದ್ಧಾಭಕ್ತಿಯ ನಂಬಿಕೆ.

ಪ್ರಸ್ತುತ ದೇವಾಲಯದ ಹೊರಾಲಯ ಮತ್ತು ಗರ್ಭಗೃಹವೂ ಸೇರಿದಂತೆ ಕಟ್ಟಡ ಜೀರ್ಣಾವಸ್ಥೆಗೆ ತಲುಪಿದ್ದು, ಕಟ್ಟಡವನ್ನು ತುರ್ತಾಗಿ ಪುನರ್ನಿರ್ಮಿಸಬೇಕಿದೆ. ನಮ್ಮ ಶ್ರೀ ರಾಮಚಂದ್ರಾಪುರ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ ಸಮಸ್ತ ಭಕ್ತಸಮೂಹದ ಸಹಭಾಗಿತ್ವದೊಂದಿಗೆ ಆಡಳಿತ ಮಂಡಳಿಯು ದೇವಾಲಯದ ಸಮೀಪವೇ ಇರುವ ವಿಶಾಲ ಸ್ಥಳದಲ್ಲಿ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಗರ್ಭಗುಡಿಯ ಅಡಿಪಾಯವನ್ನು ನಿರ್ಮಿಸಿದೆ. ಸುಸಜ್ಜಿತ ದೇವಾಲಯ ಕಟ್ಟಲು ನೀಲನಕ್ಷೆಯನ್ನು ತಯಾರಿಸಿದ್ದು ಸರಿಸುಮಾರು ರೂಪಾಯಿ 50 ಲಕ್ಷಗಳಷ್ಟು ಅಂದಾಜಿಸಲಾಗಿದ್ದು ಈ ಮಹತ್ಕಾರ್ಯಕ್ಕೆ ದೊಡ್ಡ ಪ್ರಮಾಣದ ಹಣಕಾಸಿನ ಅವಶ್ಯಕತೆಯಿದೆ. ಈ ಕಾರಣಕ್ಕಾಗಿ ದೇವಾಲಯದ ಉದ್ದೇಶಿತ ನೂತನ ಕಟ್ಟಡಕ್ಕೆ ಮತ್ತು ಧಾರ್ಮಿಕ ಪುಣ್ಯ ಕೈಂಕರ್ಯಕ್ಕೆ ಆಸ್ತಿಕ ಭಕ್ತ ಮಹನೀಯರೆಲ್ಲರ ಹಾಗೂ ಸಂಘ-ಸಂಸ್ಥೆಗಳ ಸಹಾಯ ಸಹಕಾರವನ್ನು ಕೋರುತ್ತ ಈ ಮನವಿ ನೀಡುತ್ತಿದ್ದೇವೆ.

ಧನ್ಯವಾದಗಳೊಂದಿಗೆ,

ಸ್ಥಳ : ನಾಗಿನಮನೆ

ಆಡಳಿತ ಮಂಡಳಿ ಸರ್ವಸದಸ್ಯರು
ಶ್ರೀ ಚನ್ನಕೇಶವ ದೇವಾಲಯ ಟ್ರಸ್ಟ್ (ರಿ.) ನಾಗಿನಮನೆ



## ನೂತನ ದೇವಾಲಯದ ಮಾದರಿ

